# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಡಾ॥ ವೆಂಕಟೇಶ್ ಎಸ್. ಗಡ್ಡಿಮನಿ, ಅಧ್ಯಕ್ಷರು, ಕರ್ನಾಟಕ ತೊಗರಿ ಅಭಿವೃದ್ಧಿ ಮಂಡಳಿ ಇವರಿಗೆ ವಾಹನ ಖರೀದಿಸಲು ಅನುಮತಿ ನೀಡುವ ಕುರಿತು.

**ಓದಲಾಗಿದೆ:-**

1) ಕೃಷಿ ಆಯುಕ್ತರ ಪತ್ರ ಸಂಖ್ಯೆ: ಸಾಮಾನ್ಯ/ವಾ-2/ತೊ.ಅ.ಮಂ/ವಾ.ಸೌ/03/ 2011-12. ದಿನಾಂಕ: 24-06-2011 ಮತ್ತು 03-11-2011.

*********

**ಪ್ರಸ್ತಾವನೆ:**

ಮೇಲೆ ಓದಲಾದ ಕೃಷಿ ಆಯುಕ್ತರ ಪತ್ರದಲ್ಲಿ ಡಾ॥ ವೆಂಕಟೇಶ್ ಎಸ್. ಗಡ್ಡಿಮನಿ, ಇವರನ್ನು ಕರ್ನಾಟಕ ಸರ್ಕಾರವು ಕರ್ನಾಟಕ ತೊಗರಿ ಅಭಿವೃದ್ಧಿ ಮಂಡಳಿಗೆ ಅಧ್ಯಕ್ಷರನ್ನಾಗಿ ನೇಮಿಸಿದೆ. ಮಂಡಳಿಯ ಕೇಂದ್ರಸ್ಥಾನವು ಗುಲ್ಬರ್ಗಾದಲ್ಲಿದ್ದು, ಸದರಿಯವರಿಗೆ ರಾಜ್ಯ ಸಚಿವರ ಸ್ಥಾನಮಾನದ ಸೌಲಭ್ಯಗಳನ್ನು ಒದಗಿಸಲು ಆದೇಶವಿದೆ. ಮಂಡಳಿಯ ಪತ್ರದಲ್ಲಿ ಅಧ್ಯಕ್ಷರಿಗೆ ಒಂದು ಕಂಟೆಸ್ಸಾ ಕ್ಲಾಸಿಕ್/ಅಂಬಾಸಿಡರ್ ಅಥವಾ ಇನ್ನೋವಾ ವಾಹನವನ್ನು ಖರೀದಿಸಿ ಒದಗಿಸಲು ಹಾಗೂ ಕಛೇರಿ ಹಾಗೂ ವಸತಿ ಗೃಹಕ್ಕೆ ತಲಾ ಒಂದು ದೂರವಾಣಿ ಸಂಪರ್ಕವನ್ನು ಒದಗಿಸಲು ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಕರ್ನಾಟಕ ತೊಗರಿ ಅಭಿವೃದ್ಧಿ ಮಂಡಳಿಯು ಪ್ರತ್ಯೇಕವಾಗಿ ಕಾರ್ಯನಿರ್ವಹಿಸುತ್ತಿದ್ದು, ಇದರ ಕೇಂದ್ರ ಸ್ಥಾನ ಗುಲ್ಬರ್ಗಾ ಜಿಲ್ಲೆ ಆಗಿರುತ್ತದೆ. ಅಧ್ಯಕ್ಷರಿಗೆ ಅಗತ್ಯ ಸೌಕರ್ಯಗಳನ್ನು ಅಂದರೆ ವೇತನ ಭತ್ಯೆ, ಕಾರು ಹಾಗೂ ಅದರ ನಿರ್ವಹಣಾ ವೆಚ್ಚ ಮತ್ತು ದೂರವಾಣಿ ಸಂಪರ್ಕ ಇತರೆಗಳನ್ನು ಒದಗಿಸಲು ಬೇಕಾಗಿರುವ ಅಂದಾಜು ಅನುದಾನ ರೂ.20.00 ಲಕ್ಷಗಳಾಗುವುದು. ಈ ವೆಚ್ಚವನ್ನು ಭರಿಸಲು 2011-12ನೇ ಸಾಲಿನಲ್ಲಿ ಪ್ರತ್ಯೇಕ ಲೆಕ್ಕ ಶೀರ್ಷಿಕೆ ಒದಗಿಸಿ, ಅನುದಾನ ಬಿಡುಗಡೆ ಮಾಡಿರುವುದಿಲ್ಲ. ಆದಾಗ್ಯೂ 2011-12 ನೇ ಸಾಲಿನಲ್ಲಿ ಲೆಕ್ಕ ಶಿರ್ಷಿಕೆ 2401-00-800-3-08 (ಯೋಜನೆ)ಯ ಉಪ ಲೆಕ್ಕ ಶೀರ್ಷಿಕೆ 059 ರಲ್ಲಿ ರೂ. 100.00 ಲಕ್ಷಗಳ ಅನುದಾನ ಒದಗಿಸಲಾಗಿರುತ್ತದೆ. ಈ ಅನುದಾನದಲ್ಲಿ ಸುಮಾರು ರೂ. 20.00 ಲಕ್ಷ ಉಳಿತಾಯವಾಗಿರುತ್ತದೆ.

ಈ ಮೇಲೆ ವಿವರಿಸಿದ ಅಂಶಗಳ ಹಿನ್ನಲೆಯಲ್ಲಿ ಅಧ್ಯಕ್ಷರ ಕಛೇರಿ ಉಪಯೋಗಕ್ಕಾಗಿ ಇನ್ನೋವಾ ಕಾರನ್ನು ಮಂಡಳಿವತಿಯಿಂದ ಖರೀದಿಸಿ ಒದಗಿಸಲು ಹಾಗೂ ಕಛೇರಿ ಉಪಯೋಗಕ್ಕಾಗಿ ಮತ್ತು ವಸತಿ ಗೃಹಕ್ಕೆ ತಲಾ ಒಂದರಂತೆ ದೂರವಾಣಿ ಸಂಪರ್ಕವನ್ನು ಕಲ್ಪಿಸಲು ಮಂಜೂರಾತಿಯನ್ನು ನೀಡಲು ಹಾಗೂ ಇದಕ್ಕಾಗಿ ಅನುದಾನವನ್ನು ಒಂದು ಸಲ ಕರಾರಿನ ಮೇಲೆ 2401-00-800-3-08 (ಯೋಜನೆ)ಯ ಉಪ ಲೆಕ್ಕ ಶೀರ್ಷಿಕೆ 059 ಯಿಂದ ಮಂಡಳಿಗೆ ಮಂಜೂರು ಮಾಡಿ ಬಿಡುಗಡೆ ಮಾಡಬೇಕೆಂದು ಹಾಗೂ ತೊಗರಿ ಮಂಡಳಿಗೆ ಬೇಕಾಗುವ

--2--

47

ಅನುದಾನವನ್ನು ಒದಗಿಸಲು ಕೃಷಿ ನಿರ್ದೇಶಕರಿಗೆ ಮೇಲುಸಹಿ ಮಾಡುವ ಅಧಿಕಾರವನ್ನು ಸಹ ನೀಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಅದರನ್ವಯ ಈ ಕೆಳಕಂಡಂತೆ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಕೃತೋಇ 41 ಕೃಇಮಂ 2010**
**ಬೆಂಗಳೂರು, ದಿನಾಂಕ: 20-12-2011**

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳಿಂದಾಗಿ ಸರ್ಕಾರವು ಅಧಿಕೃತ ಜ್ಞಾಪನ ಸಂಃ ಸಿಆಸುಇ 68 ಶಿವಾನೀ 2008 ರನ್ವಯ ರೂ: 11.00ಲಕ್ಷಗಳ ಮಿತಿಗೊಳಪಟ್ಟು ಪ್ರಸ್ತುತ ಜಾರಿಯಲ್ಲಿರುವ ಮಿತವ್ಯಯ ಆದೇಶವನ್ನು ಸಡಿಲಿಸಿ ಅಧ್ಯಕ್ಷರು, ಕರ್ನಾಟಕ ತೊಗರಿ ಅಭಿವೃದ್ಧಿ ಮಂಡಳಿ ಇವರಿಗೆ ಒಂದು ಹೊಸ ವಾಹನವನ್ನು ಖರೀದಿಸಲು ಸರ್ಕಾರದ ಅನುಮತಿಯನ್ನು ನೀಡಲಾಗಿದೆ.

ಈ ಅನುದಾನವನ್ನು ಲೆಕ್ಕ ಶೀರ್ಷಿಕೆ 2401-00-800-3-08 ಕರ್ನಾಟಕ ಕೃಷಿ ಮಿಷನ್ (ಯೋಜನೆ)ಯ ಉಪ ಲೆಕ್ಕ ಶೀರ್ಷಿಕೆ 059 ರಲ್ಲಿ ಮಂಡಳಿಗೆ ಬಿಡುಗಡೆ ಮಾಡಿದೆ. ಈ ಸಹಾಯಾನುಧಾನ ಬಿಲ್ಲನ್ನು (Grant in aid Bill) ಮಂಡಳಿಯಿಂದ ಪಡೆದು ಕೃಷಿ ನಿರ್ದೇಶಕರು ಮೇಲುಸಹಿ ಮಾಡಿ ಹುಜೂರ್ ಖಜಾನೆಯಿಂದ ಡ್ರಾ ಮಾಡಿ, ಚೆಕ್ಕನ್ನು ಕರ್ನಾಟಕ ತೊಗರಿ ಅಭಿವೃದ್ಧಿ ಮಂಡಳಿ, ಗುಲ್ಬರ್ಗಾ ಇವರಿಗೆ ನೀಡಲು ಮಂಜೂರಾತಿ ನೀಡಿ ಆದೇಶಿಸಿದೆ.

ಮೇಲ್ಕಂಡ ಆದೇಶವನ್ನು ಸಿಆಸುಇ (ರಾಜ್ಯ ಶಿಷ್ಠಾಚಾರ) ರವರ ಟಿಪ್ಪಣಿ ಸಂಖ್ಯೆ: ಸಿಆಸುಇ 106 ಶಿವಾನೀ 2011, ದಿನಾಂಕ: 20-07-2011 ರಲ್ಲಿ ಹಾಗೂ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ:378 – ವೆಚ್ಚ-4 2010, ದಿನಾಂಕ: 21-09-2011ರಲ್ಲಿ ನೀಡಿರುವ ಸಹಮತಿಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.

(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಕೃಷಿ ಇಲಾಖೆ, ಬೆಂಗಳೂರು.

3. ಡಾ॥ ವೆಂಕಟೇಶ್ ಎಸ್. ಗಡ್ಡಮನಿ, ಅಧ್ಯಕ್ಷರು, ಕರ್ನಾಟಕ ತೊಗರಿ ಅಭಿವೃದ್ಧಿ ಮಂಡಳಿ, ಪ್ಲಾಟ್ ಸಂಃ 42, ಕಾಟನ್ ಮಾರ್ಕೆಟ್, ಎಪಿಎಮ್‌ಸಿಯಾರ್ಡ್, ನೆಹರೂಗಂಜ್, ಗುಲಬರ್ಗಾ- 585104.
4. ನಿರ್ದೇಶಕರು ಹುಜೂರ್ ಖಜಾನೆ, ಬೆಂಗಳೂರು.
5. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬೆಂಗಳೂರು.
6. ಸರ್ಕಾರದ ಜಂಟಿ ಕಾರ್ಯದರ್ಶಿ, ಕೃಷಿ ಇಲಾಖೆ ಅವರ ಆಪ್ತ ಸಹಾಯಕರು.
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.